ಮಾಡಿದ್ದಾರೆ. ಇವರುಗಳನ್ನು ದಿನಾಂಕ 2.02.2009 ರಿಂದ ಅಮಾನತು ಮಾಡಲಾಗಿದೆ.

ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬಾರಾವ್:– ಅವರುಗಳ ಮೇಲೆ ತನಿಖೆ ಮಾಡಿಸಿ.

ಶ್ರೀ ಬಿ.ಶ್ರೀರಾಮುಲು:– ತನಿಖೆ ಮಾಡಿಯೆ ಅಮಾನತು ಮಾಡುವುದಕ್ಕೆ ತೀರ್ಮಾನ ತೆಗೆದುಕೊಳ್ಳಲಾಯಿತು.

ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬಾರಾವ್:– ಅಲ್ಲಿಗೆ ಪ್ರಾಮಾಣಿಕ ಮತ್ತು ದಕ್ಷ ಅಧಿಕಾರಿಯನ್ನು ತಕ್ಷಣ ಕೊಡಬೇಕು.

ಶ್ರೀ ಬಿ.ಶ್ರೀರಾಮುಲು:– ಆದಷ್ಟು ಬೇಗ ಕೊಡಲಾಗುತ್ತದೆ.

ಮುಳಬಾಗಿಲು ಕ್ಷೇತ್ರದಲ್ಲಿ ಮಹಿಳಾ ವೈದ್ಯರ ನೇಮಕಾತಿ ಮಾಡುವ ಬಗ್ಗೆ.

54 (128) ಶ್ರೀ. ಅಮರೇಶ್ (ಮುಳಬಾಗಲು)
ಶ್ರೀ ಬಿ. ಶ್ರೀ ರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಮುಳಬಾಗಿಲು ತಾಲ್ಲೂಕಿನ ಹೋಬಳಿಗಳ ಸರ್ಕಾರಿ ಆಸ್ಪತ್ರೆಗಳಲ್ಲಿ ಮಹಿಳಾ ವೈದ್ಯರಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಮುಳಬಾಗಿಲು ತಾಲ್ಲೂಕಿನ ಎಲ್ಲಾ ಹೋಬಳಿ ಆಸ್ಪತ್ರೆಗಳಲ್ಲಿ 18 ವೈದ್ಯಾಧಿಕಾರಿಗಳ ಹುದ್ದೆಗಳು ಮಂಜೂರಾಗಿದ್ದು ಎಲ್ಲಾ ವೈಧ್ಯಾಧಿಕಾರಿಗಳೂ ಸಹ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇಲಾಖೆಯ ವ್ಯಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ರಾಜ್ಯದಲ್ಲಿನ ಯಾವುದೇ ಸರ್ಕಾರಿ ಆಸ್ಪತ್ರೆಗೆ ಮಹಿಳಾ ವೈಧ್ಯಾಧಿಕಾರಿ ಎಂಬ ಹುದ್ದೆ ನಿರ್ದಿಷ್ಟವಾಗಿ ಇರುವುದಿಲ್ಲ.

ಆ) ಹಾಗಿದ್ದಲ್ಲಿ, ಮಹಿಳಾ ವೈದ್ಯರ ನೇಮಕಾತಿಯನ್ನು ಯಾವ ಅವಧಿಯೊಳಗಾಗಿ ಪೂರ್ಣಗೊಳಿಸಲಾಗುವುದು?

ಉದ್ಭವಿಸುವುದಿಲ್ಲ.

ಇ) ಹೋಬಳಿಗಳ ಆಸ್ಪತ್ರೆಯಲ್ಲಿ ರಾತ್ರಿಯ ಸಮಯದಲ್ಲಿಯೂ ವೈದ್ಯರುಗಳು ಕರ್ತವ್ಯದಲ್ಲಿ ಇರುವ ಹಾಗೆ ಸರ್ಕಾರ ಕ್ರಮ ಕೈಗೊಂಡಿದೆಯೇ (ವಿವರ ನೀಡುವುದು)? ಸರ್ಕಾರಿ ಆಸ್ಪತ್ರೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವೈದ್ಯಾಧಿಕಾರಿಗಳು ಮತ್ತು ಶುಶ್ರೂಷಕರು ಕೇಂದ್ರ ಸ್ಥಾನದಲ್ಲಿದ್ದು ತುರ್ತು ಸೇವೆಯನ್ನು ರಾತ್ರಿಯ ಸಮಯದಲ್ಲಯೂ ಸಹ ಒದಗಿಸಲಾಗಿದೆ.

ಶ್ರೀ ಅಮರೇಶ್:– ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ, ಹೋಬಳಿ ಕೇಂದ್ರ ಸ್ಥಾನದಲ್ಲಿ ವೈದ್ಯಾಧಿಕಾರಿಗಳು ಯಾವುದೇ ಕಾರಣಕ್ಕೂ ಇರುವುದಿಲ್ಲ. ಈ ವಿಷಯಕ್ಕೆ ಸಂಬಂಧಪಟ್ಟಂತೆ ನಾನು ಮಾಹಿತಿಯನ್ನು

ಕೂಡ ಯುವಕರಿದ್ದೀರಿ. ನೀವು ಸ್ವಲ್ಪ inspectionಗಳನ್ನು ಮಾಡಬೇಕಾಗುತ್ತದೆ. ಅದನ್ನು ತಾವು ಮಾಡದೆ ಹೋದರೆ DHO ಗಳಿಗೂ ಜವಾಬ್ದಾರಿಯನ್ನು ಕೊಡದೆ ಹೋದರೆ ಇದು ಹೀಗೆಯೇ ಮುಂದುವರಿಯುತ್ತದೆ. ಸರ್ಕಾರಿ ಆಸ್ಪತ್ರೆಗಳಿಗೆ ಹೋಗುವವರೆಲ್ಲರೂ ಬಡವರು ಆಗಿದ್ದಾರೆ. ನೀವು ಯಾವುದೇ ಆರೋಗ್ಯ ಕವಚಗಳನ್ನು ಮಾಡಿದರೂ ಕೂಡ ಅಲ್ಲಿ ಜವಾಬ್ದಾರಿಯಿಂದ ಕೆಲಸವನ್ನು ಮಾಡದೆ ಹೋದರೆ ಆ ಕವಚಗಳು ಏನು ಉಪಯೋಗಕ್ಕೆ ಬರುವುದಿಲ್ಲ. ಆದ್ದರಿಂದ ದಯಮಾಡಿ ಈ ಕಡೆಗೆ ಹೆಚ್ಚು ಗಮನವನ್ನು ಕೊಡಬೇಕೆಂದು ನಾನು ಮಂತ್ರಿಗಳಲ್ಲಿ ವಿನಂತಿಯನ್ನು ಮಾಡುತ್ತೇನೆ.

ಶ್ರೀ.ಬಿ.ಶ್ರೀರಾಮುಲು: ಮಾನ್ಯ ಅಧ್ಯಕ್ಷರೇ, ಹಿರಿಯ ನಾಯಕರಾದಂತಹ ಮಾನ್ಯ ಸಿದ್ದರಾಮಯ್ಯನವರು ಹೇಳಿರುವಂತಹದ್ದ ಸರಿಯಾಗಿದೆ. ಬಹಳಷ್ಟು ಕಡೆ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ, ಅದರಲ್ಲೂ ನಮ್ಮ ಗ್ರಾಮೀಣ ಭಾಗದಲ್ಲಿ ಎಎನ್ಎಂಗಳು, ಡಾಕ್ಟರ್ಗಳು ಆಸ್ಪತ್ರೆಯ ಕ್ವಾರ್ಟ್ನ್ಗಳಲ್ಲಿ ಉಳಿಯುತ್ತಿಲ್ಲ. ಬಹಳಷ್ಟು, ಸಿನಿಮಾಗಳು, ಇತ್ತೀಚೆಗೆ ಬರುತ್ತಿವೆ. ಆ ಸಿನಿಮಾಗಳಿಂದ ಬಹಳಷ್ಟು ಮಂದಿ ಡಾಕ್ಟರ್ಗಳು ಹೀರೋಗಳು ಆಗಿದ್ದಾರೆ. ಕೆಲವು ಸಿನಿಮಾಗಳಲ್ಲಿ ಡಾಕ್ಟರ್ಗಳು ವಿಲನ್ ಕೂಡ ಆಗಿದ್ದಾರೆ. ಅಂತಹ ಸಿನಿಮಾಗಳೇ ನಮ್ಮ ರಾಜ್ಯದಲ್ಲಿ ನೂರು ದಿನಗಳು ಓಡಿದೆ. ಅಂದರೆ ಏತಕ್ಕಾಗಿ ನಾನು ಈ ಮಾತನ್ನು ಹೇಳುತ್ತಿದ್ದೇನೆಂದರೆ, ಅಲ್ಲಿ ಡಾಕ್ಟರ್ಗಳು ಕಡ್ಡಾಯವಾಗಿ ಉಳಿಯಬೇಕು. ಅಲ್ಲಿರುವಂತಹ DHOಗಳು ಇರಬಹುದು, ನಮ್ಮ ಎಎನ್ಎಂಗಳು ಇರಬಹುದು ತಾಲ್ಲೂಕು ಮಟ್ಟದ ಅಧಿಕಾರಿಗಳು ಆಗಿರಬಹುದು. ಅಲ್ಲಿ ಅವರುಗಳು ಕಡ್ಡಾಯವಾಗಿ ಉಳಿಯಬೇಕು. ಈಗ ಇರುವಂತಹ ಪರಿಸ್ಥಿತಿಯಲ್ಲಿ ಸಾಕಷ್ಟು ಜನರು ಉಳಿಯುತ್ತಿಲ್ಲ. ಸಾಕಷ್ಟು ಜಾಗ್ರತೆಯನ್ನು ವಹಿಸಬೇಕೆಂದು ಸಾಕಷ್ಟು ಸಿನಿಮಾಗಳು ಬರುತ್ತಿವೆ. ಎಲ್ಲಾ ಸಿನಿಮಾಗಳು ಆರೋಗ್ಯ ಇಲಾಖೆಯ ವತಿಯಿಂದಲೇ ತೆಗೆಯುತ್ತಿದ್ದಾರೆ. ಇವತ್ತು ನಾನು ಕಡ್ಡಾಯವಾಗಿ ಪ್ರಯತ್ನವನ್ನು ಮಾಡುತ್ತಿದ್ದೇನೆ. ಎಲ್ಲಾ ರೆಕಾರ್ಡ್ಸ್ನ್ನು ತೆಗೆದು ನೋಡಿ. ಆರೋಗ್ಯ ಇಲಾಖೆಗೆ ಎಲ್ಲಾ ಇಲಾಖೆಯನ್ನು ನಾನು ಕಂಪೇರ್ ಮಾಡುವುದಕ್ಕೆ ಹೋಗುವುದಿಲ್ಲ. ಬಹಳಷ್ಟು ಒಳ್ಳೆಯ ಕೆಲಸಗಳು ಆಗುತ್ತಿದೆ. ಅಲ್ಲಿ ವಿರೋಧಪಕ್ಷದಲ್ಲಿ ಕುಳಿತ ನೀವೆಲ್ಲರೂ ಕೂಡ ಅದನ್ನು ಒಪ್ಪಿಕೊಳ್ಳಲೇಬೇಕು. ಏಕೆಂದರೆ ತಾವು ಸಂಪೂರ್ಣವಾಗಿ ಕಡತವನ್ನು ತೆಗೆದು ನೋಡಿದರೆಗೊತ್ತಾಗುತ್ತದೆ. ಮುಂಬರುವಂತಹ ದಿನಗಳಲ್ಲಿ ಎಲ್ಲಾ ಜಿಲ್ಲಾ ಆಸ್ಪತ್ರೆಗಳಿಗೆ ಹೋಗುವಂತಹ ಪ್ರಯತ್ನವನ್ನು ನಾನು ನಡೆಸುತ್ತೇನೆ. ಅದಷ್ಟು ನಾನು ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಗ್ರಾಮೀಣ ಭಾಗಕ್ಕೆ ಹೋಗಬೇಕಾದರೆ ಅದಕ್ಕೆ ಸಮಯವು ಬೇಕಾಗುತ್ತದೆ. ಮುಂಬರುವಂತಹ ದಿನಗಳಲ್ಲಿ ಕಡ್ಡಾಯವಾಗಿ ಒಂದು ರೂಲ್ನ್ನು ತಂದು ಒಂದು ಹೊಸ ನೀತಿಯನ್ನು ತಂದು ಅವರಿಗೆ ಬೇಕಾದಂತಹ ವ್ಯವಸ್ಥೆಯನ್ನು ಮಾಡಿಕೊಟ್ಟು ಸೆಕ್ಯುರಿಟಿಯಾಗಿರಬಹುದು, ನೀರಿನ ವ್ಯವಸ್ಥೆಯಾಗಿರಬಹುದು, ಕರೆಂಟ್

ಆಗಿರಬಹುದು, ಅವರಿಗೆ ಎಲ್ಲಾ ವ್ಯವಸ್ಥೆಯನ್ನು ಮಾಡಿ ಅಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೂ ಹಳ್ಳಿಯ ಭಾಗದ ಜನರಿಗೆ ತೊಂದರೆಯಾಗದ ರೀತಿಯಲ್ಲಿ ಅಲ್ಲಿರುವಂತಹ ವ್ಯವಸ್ಥೆಯನ್ನು ಅದಷ್ಟು ಬೇಗನೆ ನಾನು ಸರಿ ಮಾಡಿಕೊಡುತ್ತೇನೆಂದು ಈ ಸಭೆಯ ಮೂಲಕ ಈ ರಾಜ್ಯದ ಜನರಿಗೆ ನಾನು ತಿಳಿಸುತ್ತೇನೆ.

ಅಧ್ಯಕ್ಷರು: ಶ್ರೀ ವಿಶ್ವನಾಥ್ ಚಂದ್ರಶೇಖರ್ ಮಾಮನಿಯವರು ಸದನದಲ್ಲಿ ಇಲ್ಲಾ. ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲರವರೆ ತಾವು ಪ್ರಶ್ನೆಯನ್ನು ಕೇಳಿ.

ಸೇಡಂ ಕ್ಷೇತ್ರ ವ್ಯಾಪ್ತಿಯಲ್ಲಿ ವೈದ್ಯರ ಕೊರತೆ ಬಗ್ಗೆ.

56 (133) ಶ್ರೀ.ಡಾ:ಶರಣ ಪ್ರಕಾಶ ರುದ್ರಪ್ಪ ಪಾಟೀಲ್ (ಸೇಡಂ)
ಶ್ರೀ.ಬಿ.ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಸೇಡಂ ತಾಲ್ಲೂಕಿನ ಮುಧೋಳ ಗ್ರಾಮದಲ್ಲಿರು ಸಮುದಾಯ ಆರೋಗ್ಯ ಕೇಂದ್ರದಲ್ಲಿ ವೈದ್ಯರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಬಂದಿದೆ.

ಸೇಡಂ ತಾಲ್ಲೂಕಿನ ಮುಧೋಳ ಗ್ರಾಮದಲ್ಲಿರುವ ಸಮುದಾಯ ಆರೋಗ್ಯ ಕೇಂದ್ರದಲ್ಲಿ 5 ತಜ್ಞ ವೈದ್ಯರ ಹುದ್ದೆ ಮಂಜೂರಾಗಿದ್ದ 2 ತಜ್ಞ ವೈದ್ಯರು ಕಾರ್ಯನಿರ್ವಹಿಸುತ್ತಿದ್ದಾರೆ 3 ತಜ್ಞ ವೈದ್ಯರ ಹುದ್ದೆ ಖಾಲಿ ಇದೆ.

ಆ) ಹಾಗಾದ್ದಲ್ಲಿ, ಸೇಡಂ ತಾಲ್ಲೂಕಿನಲ್ಲಿ ಮತ್ತು ಮತಕ್ಷೇತ್ರದಲ್ಲಿ ಖಾಲಿ ಇರುವ ವೈದ್ಯಕೀಯ ಮತ್ತು ಅರೆ ವೈದ್ಯಕೀಯ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದೇ?

ತಜ್ಞ ವೈದ್ಯರ ಹುದ್ದೆಗಳನ್ನು ತಾತ್ಕಾಲಿಕವಾಗಿ ನಿವೃತ್ತ ತಜ್ಞ ವೈದ್ಯರಗಳನ್ನು ಸಂದರ್ಶಕ ತಜ್ಞ ವೈದ್ಯರುಗಳನ್ನಾಗಿ ನೇಮಿಸಿಕೊಳ್ಳಲು ಜಿಲ್ಲಾ ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಲಾಗಿದೆ. ಇಲಾಖೆಯಲ್ಲಿ ಸೇವಾನಿರತ ವೈದ್ಯರುಗಳು ಸ್ನಾತಕೋತ್ತರ ಪದವಿ ಪಡೆದು ಬಂದ ನಂತರ ತಜ್ಞ ವೈದ್ಯರುಗಳನ್ನು ಆದ್ಯತೆ ಮೇರೆಗೆ ಭರ್ತಿ ಮಾಡಲು ಸಹ ಕ್ರಮ ಕೈಗೊಳ್ಳಲಾಗುವುದು.

ಆರೋಗ್ಯ ಇಲಾಖೆಯಲ್ಲಿ ಖಾಲಿ ಇರುವ 5021 ಅರೆವೈದ್ಯಕೀಯ ಹುದ್ದೆಗಳನ್ನು ವಿಶೇಷ ನೇರ ನೇಮಕಾಗಿ ಮುಖಾಂತರ ಭರ್ತಿ ಮಾಡಲು, ನೇಮಕಾತಿ ನಿಯಮಗಳ ಕರಡು ಅಧಿಸೂಚನೆಚುನ್ನು ಆಕ್ಷೇಪಣೆ/ಸಲಹೆ ಸಲ್ಲಿಸಲು 15 ದಿನಗಳ ಕಾಲಾವಕಾಶ ನೀಡಿ ದಿನಾಂಕ: 7-2-2009 ರಂದು ಹೊರಡಿಸಲಾಗಿದೆ. ಸದರಿ ನಿಯಮಗಳು ಅಂತಿಮಗೊಂಡ ನಂತರ ನೇಮಕಾತಿ ಪ್ರಕ್ರಿಯೆ ಪ್ರಾರಂಭಗೊಳ್ಳುತ್ತದೆ. ಅಭ್ಯರ್ಥಿಗಳು ಲಭ್ಯವಾದ ನಚಿತರ ಖಾಲಿ ಹುದ್ದೆಗಳನ್ನು ಆದ್ಯತೆ ಮೇಲೆ ಭರ್ತಿ ಮಾಡಲಾಗುವುದು.